ಬರ ಘೋಷಣೆಯಾಯ್ತು ರೈತನಿಗೆ ಆಸರೆ ಯಾವಾಗ...?

ಶೇ.39ರಷ್ಟು ಮುಂಗಾರು ಮಳೆ ಕೊರತೆ | 57 ಸಾವಿರ ಹೆಕ್ಟೇರ್‌ನಲ್ಲಿ ಬೆಳೆದ ಭತ್ತ ತೇವಾಂಶ ಕುಸಿತ

ಸಂ.ಕ ಸಮಾಚಾರ, ಬೆಳಗಾವಿ

ಕಾಳು ತುಂಬಬೇಕಾದ ಭತ್ತ ನೀರಿಲ್ಲದೆ ಒಣಗುತ್ತಿದೆ. ಕೊಯ್ಲಿನ ನಿರೀಕ್ಷೆಯಲ್ಲಿದ್ದ ಕೆಲ ಹೊಲಗಳಲ್ಲಿ ಬೆಳೆಯನ್ನು ಮೇವಾಗಿ ಬಳಸಲಾಗುತ್ತಿದೆ. ಮುಂಗಾರು ಕೈಕೊಟ್ಟಿರುವ ಬೆಳಗಾವಿ ಜಿಲ್ಲೆಯ ರೈತರ ಮುಂದೆ ಈಗ ಉಳಿದ ಬೆಳೆ ಉಳಿಸಿಕೊಳ್ಳುವ ಚಿಂತೆಯ ಜೊತೆಗೆ ಹಿಂಗಾರಿಗೆ ಮತ್ತೆ ಹಣ ಹೂಡುವ ಸವಾಲು ಎದುರಾಗಿದೆ.

ಬರ ಘೋಷಣೆಯ ನಂತರದ ಪ್ರಶ್ನೆ ಸ್ಪಷ್ಟವಾಗಿದೆ. ಹಾನಿಯ ಲೆಕ್ಕ ಯಾವಾಗ ಪೂರ್ಣಗೊಳ್ಳುತ್ತದೆ, ನೆರವು ಯಾವಾಗ ಕೈ ಸೇರುತ್ತದೆ ?

ಇವತ್ತಿನವರೆಗೆ ಲಭ್ಯವಿದ್ದ ಮಾಹಿತಿಯ ಪ್ರಕಾರ, ಜಿಲ್ಲೆಯ ಕೃಷಿ ಸಂಕಷ್ಟಕ್ಕೆ ಭತ್ತದ ಸ್ಥಿತಿ ಪ್ರಮುಖ ನಿದರ್ಶನವಾಗಿದೆ. ಅಕ್ಟೋಬರ್ 3ರ ವರದಿಯಲ್ಲಿ ಜಿಲ್ಲೆಯ ಮುಂಗಾರು ಮಳೆ ಕೊರತೆ

ಶೇ.39ರಷ್ಟಿದೆ ಎಂದು ಉಲ್ಲೇಖವಾಗಿದೆ.

ಸಾಂದರ್ಭಿಕ ಚಿತ್ರ.

- ಮುಂಗಾರು ನಷ್ಟದಲ್ಲಿ ಹಿಂಗಾರಿನ ಚಿಂತೆ
- ಬೆಳಗಾವಿಯಲ್ಲಿ ಬೆಳೆ ಉಳಿಸಲು ಪರದಾಟ
- ಹಿಂಗಾರಿ ಬೆಳೆ ಮತ್ತೆ ಬಿತ್ತುವುದಕ್ಕೂ ಸವಾಲು

ಸುಮಾರು 57 ಸಾವಿರ ಹೆಕ್ಟೇರ್‌ನಲ್ಲಿ ಬೆಳೆದ ಭತ್ತ ತೇವಾಂಶದ ಕೊರತೆಗೆ ಸಿಲುಕಿದ್ದು, ಖಾನಾಪುರ, ಬೆಳಗಾವಿ ಹಾಗೂ ಕಿತ್ತೂರು ತಾಲೂಕಿನ ಪೂರ್ವ ಭಾಗದ ರೈತರು ಇಳುವರಿ ಕುಸಿತದ ಆತಂಕದಲ್ಲಿದ್ದಾರೆ.

ಸಾಮಾನ್ಯವಾಗಿ ಎಕರೆಗೆ 20ರಿಂದ 25 ಕ್ವಿಂಟಲ್ ಭತ್ತ ನಿರೀಕ್ಷಿಸುವ ರೈತರು, ಈ ಬಾರಿ ಇಳುವರಿ 10 ಕ್ವಿಂಟಲ್‌ಗಿಂತಲೂ ಕೆಳಗೆ ಇಳಿಯಬಹುದು ಎಂದು ಕಳವಳ ವ್ಯಕ್ತಪಡಿಸಿದ್ದಾರೆ. ಇದು ರೈತರ ಅಂದಾಜು. ಜಿಲ್ಲೆಯ ಅಂತಿಮ ಬೆಳೆಹಾನಿ ಪ್ರಮಾಣ ಇನ್ನೂ ನಿರ್ಧಾರವಾಗಬೇಕಿದೆ. ಹಾನಿ ಸಮೀಕ್ಷೆ ನಡೆಸಲಾಗುತ್ತಿದೆ ಎಂದು ಕೃಷಿ ಇಲಾಖೆ ತಿಳಿಸಿದೆ. ಬರಪೀಡಿತ ಪ್ರದೇಶಗಳ ಅಕ್ಟೋಬರ್ 1ರ ಹೆಚ್ಚುವರಿ ಪಟ್ಟಿಯಲ್ಲಿ ಗೋಕಾಕ, ರಾಮದುರ್ಗ, ಸವದತ್ತಿ ಮತ್ತು ಕಾಗವಾಡ ತಾಲೂಕುಗಳು ಸೇರಿವೆ.

ಸದ್ಯ ಪರಿಶೀಲಿಸಿದ ಮೂಲಗಳಲ್ಲಿ ಜಿಲ್ಲೆಯ ಹಿಂಗಾರು ಬಿತ್ತನೆಯ ಇಂದಿನ ಒಟ್ಟು ವಿಸ್ತೀರ್ಣ, ಅಂತಿಮ ಬೆಳೆಹಾನಿ ಮೊತ್ತ ಮತ್ತು ರೈತರ ಖಾತೆಗೆ ತಲುಪಿರುವ ಬರ ಪರಿಹಾರದ ಸಮಗ್ರ ಮಾಹಿತಿ ಇಲ್ಲ. ಮುಂಗಾರು ನಷ್ಟ ದಾಖಲಿಸುವುದರ ಜೊತೆಗೆ ಹಿಂಗಾರಿನಲ್ಲಿ ಮತ್ತೊಂದು ನಷ್ಟವಾಗದಂತೆ ನೆರವಾಗುವುದು ಈಗಿನ ತುರ್ತು ಕೆಲಸ. ಬೆಳಗಾವಿಯ ರೈತನಿಗೆ ಬರ ಘೋಷಣೆ ಸಂಕಷ್ಟದ ಅಧಿಕೃತ ಗುರುತು. ಸಮಯಕ್ಕೆ ತಲುಪುವ ನೆರವೇ ಮುಂದಿನ ಹಂಗಾಮಿನ ಆಸರೆ!

ಹಿಂಗಾರಿಗೂ ಕಂಟಕ...?

ಮುಂಗಾರಿನಲ್ಲಿ ಮಾಡಿದ ವೆಚ್ಚ ವಾಪಸ್ ಬರುವುದೇ ಎಂಬ ಅನಿಶ್ಚಿತತೆ ನಡುವೆ ಮುಂದಿನ ಬಿತ್ತನೆಗೆ ಸಿದ್ಧವಾಗಬೇಕಾದ ಸ್ಥಿತಿ ರೈತ ಸಮೂಹದ್ದಾಗಿದೆ. ಹಿಂಗಾರು ಮಳೆ ಬಂದರೂ ಅದರ ಪ್ರಮಾಣ, ಹಂಚಿಕೆ ಮತ್ತು ಮಣ್ಣಿನಲ್ಲಿ ಉಳಿಯುವ ತೇವಾಂಶ ಮುಂದಿನ ಬೆಳೆಯ ಸ್ಥಿತಿ ನಿರ್ಧರಿಸಲಿವೆ. ರಾಜ್ಯದಲ್ಲಿ ಅಕ್ಟೋಬರ್ ಮತ್ತು ನವೆಂಬರ್ ಮಳೆ ವಾಡಿಕೆಗಿಂತ ಕಡಿಮೆಯಾಗಬಹುದು ಎಂಬ ಹವಾಮಾನ ಇಲಾಖೆಯ ಮುನ್ಸೂಚನೆ ಈಗಾಗಲೇ ವರದಿಯಾಗಿದೆ. ಜಿಲ್ಲೆಗೆ ಸಂಬಂಧಿಸಿದ ನವೀಕೃತ ಮುನ್ಸೂಚನೆ ಹಾಗೂ ಸ್ಥಳೀಯ ತೇವಾಂಶದ ಸ್ಥಿತಿ ಆಧರಿಸಿ ಬಿತ್ತನೆ ಸಲಹೆ ನೀಡಬೇಕಿದೆ.

ಬೋರಗಾಂವ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಸಹಕಾರ ಸಂಘದ ಇಬ್ಬರು ಸದಸ್ಯರ ಮೃತರ ಕುಟುಂಬಕ್ಕೆ ತಲಾ 1 ಲಕ್ಷರೂನಂತೆ 2 ಲಕ್ಷರೂ ಪರಿಹಾರ ಧನದ ಚೆಕ್‌ನ್ನು ಸಂಘದ ಅಧ್ಯಕ್ಷ ಉತ್ತಮ ಪಾಟೀಲ ವಿತರಿಸಿದರು.

ಮೃತರ ಕುಟುಂಬಗಳಿಗೆ ಪರಿಹಾರ

ಯಕ್ಸಂಬಾ : ಸಮೀಪದ ಬೋರಗಾಂವ ಪಟ್ಟಣದ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಸಹಕಾರ ಸಂಘದ ಇಬ್ಬರು ಸದಸ್ಯರ ಮೃತರ ಕುಟುಂಬಕ್ಕೆ ತಲಾ 1 ಲಕ್ಷ ರೂನಂತೆ 2 ಲಕ್ಷರೂ ಪರಿಹಾರ ಧನದ ಚೆಕ್‌ನ್ನು ಸಂಘದ ಅಧ್ಯಕ್ಷ ಉತ್ತಮ ಪಾಟೀಲ ವಿತರಿಸಿದರು,

ಮೃತ ಸದಸ್ಯ ಮಹೇಶ ರಾಜಾರಾಮ ಚೌಗುಲೆ ಅವರ ಪತ್ನಿ ಸವಿತಾ ಮಹೇಶ ಚೌಗುಲೆ ಅವರಿಗೆ 1 ಲಕ್ಷರೂ ಮತ್ತು ಬಾಳಾಸಾಹೇಬ ಬಾಬು ಅಮ್ಮನ್ನವರ ಅವರ ಪತ್ನಿ ವಿಲಾಸಮತಿ ಬಾಳಾಸಾಹೇಬ ಅಮ್ಮನ್ನವರ ಅವರಿಗೆ 1 ಲಕ್ಷರೂ ಪರಿಹಾರ ಧನದ ಚೆಕ್ ವಿತರಿಸಿ ಮಾತನಾಡಿದ ಅವರು, ಸಂಘದ ಸದಸ್ಯರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಎಲ್ಲ ಯೋಜನೆ ಮುಟ್ಟಿಸುವ ಕೆಲಸ ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ ಎಂದು ಹೇಳಿದರು.

ಸಂಘದ ಉಪಾಧ್ಯಕ್ಷ ಸುಮಿತ್ ರೊಡ್ಡ, ಸಂಚಾಲಕರಾದ ರಾಜೇಂದ್ರ ಪಾಟೀಲ, ಪ್ರದೀಪ ಮಾಳಿ, ಪ್ರವೀಣ ಪಾಟೀಲ, ರಾಜೇಂದ್ರ ಐದಮಾಳೆ, ರಾಜು ಗಜರೆ, ಸುನೀತಾ ಬಂಕಾಪುರೆ, ಪ್ರಜಕ್ತಾ ಪಾಟೀಲ, ಮುಖ್ಯ ಕಾರ್ಯನಿರ್ವಾಹಕ ಆರ್.ಟಿ. ಚೌಗುಲೆ ಇದ್ದರು.

ಶೇಡಬಾಳ ಪಟ್ಟಣದ ಹೊರವಲಯದಲ್ಲಿ ಚಿರತೆ ಹೆಜ್ಜೆಗಳು ಕಾಣಿಸಿದ್ದು ಅರಣ್ಯ ಇಲಾಖೆಯ ಅಧಿಕಾರಿ ಶೋಧಕಾರ್ಯ ನಡೆಸಿರುವ ಚಿತ್ರ.

ಶೇಡಬಾಳದಲ್ಲಿ ಚಿರತೆ ಹೆಜ್ಜೆ ಗುರುತು

ಮೋಳೆ : ಕಾಗವಾಡ ತಾಲೂಕಿನ ಶೇಡಬಾಳ ಪಟ್ಟಣದ ಸುತ್ತ-ಮುತ್ತಲಿನ ಪರಿಸರದಲ್ಲಿ ಚಿರತೆ ಸಂಚರಿಸಿರುವ ಶಂಕೆಗೆ ಕಾರಣವಾಗುವ ಹೆಜ್ಜೆ ಗುರುತುಗಳು ಪತ್ತೆಯಾಗಿದ್ದು ಪಟ್ಟಣದ ನಿವಾಸಿಗಳು ಹಾಗೂ ಕೃಷಿಕರಲ್ಲಿ ತೀವ್ರ ಆತಂಕದ ವಾತಾವರಣ ನಿರ್ಮಾಣವಾಗಿದೆ.

ಇಂದು ಮುಂಜಾನೆ ತಮ್ಮ ಜಮೀನುಗಳ ಕಡೆಗೆ ತೆರಳಿದ್ದ ರೈತರಿಗೆ ಹೊಲದ ಬದುವಿನಲ್ಲಿ ಬೃಹತ್ ಗಾತ್ರದ ವನ್ಯಮೃಗದ ಹೆಜ್ಜೆ ಗುರುತುಗಳು ಕಂಡುಬಂದಿವೆ. ಇದನ್ನು ಚಿರತೆಯ ಹೆಜ್ಜೆ ಗುರುತುಗಳೇ ಎಂದು ಶಂಕಿಸಿದ ರೈತರು, ತಕ್ಷಣವೇ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ದೌಡಾಯಿಸಿದ ಅರಣ್ಯ ಇಲಾಖೆ ಅಧಿಕಾರಿ ರಾಕೇಶ ಅರ್ಜುನವಾಡ ನೇತೃತ್ವದ ತಂಡ ಹೆಜ್ಜೆ ಗುರುತುಗಳನ್ನು ಸೂಕ್ಷ್ಮವಾಗಿ ಪರಿಶೀಲನೆ ನಡೆಸಿದ್ದಾರೆ.

ಪ್ರಸ್ತುತ ಚಿರತೆ ಯಾವ ಪ್ರದೇಶದಲ್ಲಿ ಸಂಚರಿಸುತ್ತಿದೆ ಎಂಬುದನ್ನು ಪತ್ತೆಹಚ್ಚಲು ಅರಣ್ಯ ಸಿಬ್ಬಂದಿ ಸುತ್ತಮುತ್ತಲಿನ ತೋಟದ ಹಾಗೂ ಕಬ್ಬಿನ ಗದ್ದೆಗಳಲ್ಲಿ ಶೋಧ ಕಾರ್ಯವನ್ನು ಚುರುಕುಗೊಳಿಸಿದ್ದಾರೆ.

ಚಿರತೆ ಸಂಚಾರದ ಶಂಕೆ ಹಿನ್ನೆಲೆಯಲ್ಲಿ ಶೇಡಬಾಳ ಪಟ್ಟಣ ಪಂಚಾಯಿತಿ ವತಿಯಿಂದ ಸಾರ್ವಜನಿಕರಿಗೆ ಧ್ವನಿವರ್ಧಕಗಳ ಮೂಲಕ ಎಚ್ಚರಿಕೆ ನೀಡಲಾಗಿದೆ. ಚಿರತೆಯ ಭೀತಿ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ತಕ್ಷಣವೇ ಬೋನು ಅಳವಡಿಸಿ, ಕಾಗವಾಡ ತಾಲೂಕಿನ ಜನತೆಗೆ ಅಗತ್ಯ ಸುರಕ್ಷತೆ ಒದಗಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಬಸ್ ಪುನರಾರಂಭಕ್ಕೆ ಮನವಿ

ಬೆಳಗಾವಿ: ನಗರದ ಉತ್ತರ ಕ್ಷೇತ್ರದಲ್ಲಿ ಸಾರಿಗೆ ಸಂಪರ್ಕದ ಕೊರತೆ ನೀಗಿಸುವಂತೆ ಆಗ್ರಹಿಸಿ 'ನ್ಯಾಯವೆಂಬ ಬೆಳಕು' ಸಂಸ್ಥೆಯ ವತಿಯಿಂದ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಕರಿಗೆ ಸೋಮವಾರ ಮನವಿ ಸಲ್ಲಿಸಲಾಯಿತು.

ಸಂಸ್ಥೆಯ ಅಧ್ಯಕ್ಷ ಹಾಗೂ ನ್ಯಾಯವಾದಿ ಸುನೀಲ ಸಾಣಿಕೊಪ್ಪ ಮಾತನಾಡಿ, ಕೇಂದ್ರ ಬಸ್ ನಿಲ್ದಾಣದ ಪೂರ್ವ ಉತ್ತರ ಭಾಗದಲ್ಲಿ ಮಹಾಂತೇಶನಗರ ಸೇರಿದಂತೆ ಹಲವು ಬಡಾವಣೆಗಳು ವ್ಯಾಪಕವಾಗಿ ಬೆಳೆಯುತ್ತಿದ್ದು, ಈ ಪ್ರದೇಶದಲ್ಲಿ ಸಾವಿರಾರು ಜನರು ವಾಸಿಸುತ್ತಿದ್ದಾರೆ. ಅಶೋಕನಗರ, ಮಹಾಂತೇಶನಗರ, ಶಿವಬಸವನಗರ, ಆಂಜನೇಯನಗರ, ಶ್ರೀನಗರ, ವಂಟಮುರಿ, ರಾಮತೀರ್ಥನಗರ, ಆಟೋನಗರ, ಕಣಬರ್ಗಿ, ಸಿದ್ಧೇಶ್ವರನಗರ, ಕಲಕಾಂಬ, ಮುಚ್ಚಂಡಿ, ಖನಗಾಂವ, ಹೊಸಗಾಂಧೀನಗರ, ರುಕ್ಮಿಣಿನಗರ, ರೇವೆನ್ಯೂ ಕಾಲನಿ, ಭಾರತನಗರ ಸೇರಿದಂತೆ ಹಲವು ಪ್ರದೇಶಗಳಿಗೆ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಈ ಹಿಂದೆ ಬೈಲಹೊಂಗಲ, ಸೌದತ್ತಿ, ಧಾರವಾಡ ಹಾಗೂ ಬೆಂಗಳೂರು ಮಾರ್ಗದ ಬಸ್‌ಗಳು ಮಹಾಂತೇಶನಗರ ಮೇಲ್ಸೇತುವೆ ಮೂಲಕ ಸಂಚರಿಸುತ್ತಿದ್ದವು. ಇದರಿಂದ ಈ ಭಾಗದ ಜನರು ಕೇಂದ್ರ ಬಸ್ ನಿಲ್ದಾಣಕ್ಕೆ ತೆರಳದೆ ಮೇಲ್ಸೇತುವೆಯಲ್ಲಿಯೇ ಬಸ್ ಹತ್ತಲು ಅನುಕೂಲವಾಗಿತ್ತು. ಆದರೆ ಇತ್ತೀಚೆಗೆ ಸಂಚಾರ ದಟ್ಟಣೆ ಹಾಗೂ ಡೀಸೆಲ್ ಉಳಿತಾಯದ ಕಾರಣ ನೀಡಿ ಮಾರ್ಗ ಬದಲಿಸಲಾಗಿದ್ದು, ಬಸ್‌ಗಳು ಹಳೆಯ ಪಿಬಿ ರಸ್ತೆಯ (ಬಿ.ಎಸ್. ಯಡಿಯೂರಪ್ಪ ಮಾರ್ಗ) ಮೂಲಕ ಸಂಚರಿಸುತ್ತಿವೆ. ಇದರಿಂದ ಸ್ಥಳೀಯರಿಗೆ ತೊಂದರೆಯಾಗಿದ್ದು, ಹೊಸ ಮಾರ್ಗದಲ್ಲಿ ಪ್ರಯಾಣಿಕರ ಸಂಖ್ಯೆ ಕಡಿಮೆಯಿರುವುದರಿಂದ ಸಾರಿಗೆ ಸಂಸ್ಥೆಗೂ ಆದಾಯ ನಷ್ಟವಾಗುತ್ತಿದೆ ಎಂದು ಹೇಳಿದರು.

ಬೈಲಹೊಂಗಲ, ಸೌದತ್ತಿ, ಧಾರವಾಡ ಹಾಗೂ ಬೆಂಗಳೂರು ಕಡೆಗೆ ತೆರಳುವ ಬಸ್‌ಗಳನ್ನು ಹಿಂದಿನಂತೆ ಮಹಾಂತೇಶನಗರ ಮೇಲ್ಸೇತುವೆ ಮೂಲಕ ಸಂಚರಿಸುವಂತೆ ನಿರ್ದೇಶಿಸಬೇಕು. ಅಲ್ಲದೆ, ಮೇಲ್ಸೇತುವೆ ಬಳಿ ಶಾಶ್ವತ ಹಾಗೂ ವಿಶಾಲವಾದ ಬಸ್ ನಿಲ್ದಾಣ ನಿರ್ಮಿಸಬೇಕು ಎಂದು ಮನವಿ ಮಾಡಿದರು.

ನೈರುತ್ಯ ರೈಲ್ವೆ
ಇ-ಟೆಂಡರ್ ಪ್ರಕಟಣೆ ಸಂ.: ಸಿಎಒ/ಸಿಎನ್/ಬಿಎನ್‌ಸಿ/ 200/2026 ದಿನಾಂಕ: 29.09.2026
ಭಾರತದ ರಾಷ್ಟ್ರಪತಿಗಳ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಕೆಳಗೆ ನಮೂದಿಸಿರುವ ಕಾಮಗಾರಿಗೆ ಇ-ಟೆಂಡರ್ ಆಹ್ವಾನಿಸಿರುತ್ತಾರೆ

ಕಾಮಗಾರಿ ವಿವರ	ಅಂದಾಜು ವೆಚ್ಚ
ನೈರುತ್ಯ ರೈಲ್ವೆ ನಿರ್ಮಾಣ ವಿಭಾಗದ ವ್ಯಾಪ್ತಿಯಲ್ಲಿನ ವಿವಿಧ ಯೋಜನೆಗಳಲ್ಲಿ, ವಲಯದ ಯಾವುದೇ ಸ್ಥಳದಲ್ಲಿ 20 ಆರ್‌ಪಿ ವರೆಗಿನ ಯಾವುದೇ ರೈಲು ವಿಭಾಗಕ್ಕೆ 'ಮೊಬೈಲ್ ಫ್ಲ್ಯಾಶ್ ಬಟ್ ವೆಲ್ಡಿಂಗ್' ಕಾರ್ಯವನ್ನು ಕೈಗೊಳ್ಳುವುದು. (ಟೆಂಡರ್ ಉಲ್ಲೇಖ ಸಂಖ್ಯೆ: FBW-SWR-CN-2026)	Rs. 16,64,06,323/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23.10.2026 ಸಮಯ: 15:00 ಗಂಟೆಯವರೆಗೆ.
ಹೆಚ್ಚಿನ ಮಾಹಿತಿಗಾಗಿ www.ireps.gov.in ಲಾಗ್‌ಇನ್ ಮಾಡಿ
ಉಪ ಮುಖ್ಯ ಎಂಜಿನಿಯರ್/ನಿರ್ಮಾಣ ಕಾಮಗಾರಿಗಳು/ಬೆಂಗಳೂರು ಕಂಟೋನ್ಮೆಂಟ್
ಪಿಐಬಿ/518/ಎಎವಿ/ಐಆರ್‌ಬಿ/ಎಸ್‌ಡಬ್ಲ್ಯೂಆರ್/2026-27
ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ
South Western Railway - SWR | SWRRLY | SWRAILWAYHQ | @sw_railways

ಹುಕ್ಕೇರಿ ತಾಲೂಕು ಬರ ಪಟ್ಟಿಗೆ ಪಟ್ಟು

ಹುಕ್ಕೇರಿ: ಹುಕ್ಕೇರಿ ತಾಲೂಕು ಬರ ಪಟ್ಟಿಗೆ ಸೇರಿಸುವಂತೆ ಒತ್ತಾಯಿಸಿ ಸೋಮವಾರ ಪಕ್ಷಾತೀತವಾಗಿ ಬೃಹತ್ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಬಲರಾಮ ಕಟ್ಟಿಮನಿ ಅವರಿಗೆ ಮನವಿ ಸಲ್ಲಿಸಲಾಯಿತು

ಶಾಸಕ ನಿಖಿಲ ಕತ್ತಿ ನೇತೃತ್ವದಲ್ಲಿ ಪಟ್ಟಣದ ಪಿಕಾರ್ಡ್ ಬ್ಯಾಂಕ್‌ನಿಂದ ಬಸವೇಶ್ವರ ವೃತ್ತದವರೆಗೆ ಸಾವಿರಾರು ರೈತರ ಬೃಹತ್ ಮೆರವಣಿಗೆ ನಡೆಸಿದರು. ಸರ್ಕಾರದ ವಿರುದ್ಧ ಘೋಷಣೆ, ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ, ಮಾನವ ಸರಪಳಿ, ರಸ್ತೆತಡೆ ನಡೆಸಿ ತಹಶೀಲ್ದಾರ ಬಲರಾಮಕಟ್ಟಿಮನಿ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಮಾತನಾಡಿದ ಶಾಸಕ ನಿಖಿಲ ಕತ್ತಿ, ರೈತರ ಹೊಟ್ಟೆ ಮೇಲೆ ಹೊಡೆಯುತ್ತಿರುವ ರಾಜ್ಯ ಸರ್ಕಾರದ ಧೋರಣೆ ಖಂಡನೀಯ. ಕೂಡಲೇ ಹುಕ್ಕೇರಿ ತಾಲೂಕು ಬರಪೀಡಿತ ಪಟ್ಟಿಗೆ ಸೇರಿಸಬೇಕು, ಬೆಳೆ ಸಾಲ ಸಂಪೂರ್ಣ ಮನ್ನಾ ಮಾಡಿ ಬೆಳೆ ಪರಿಹಾರದ ಜೊತೆಗೆ ಕುಡಿಯುವ ನೀರಿಗಾದರೂ 7 ಗಂಟೆ ನಿರಂತರ ವಿದ್ಯುತ್ ಕೊಡಬೇಕು ಎಂದು ಆಗ್ರಹಿಸಿದರು.

ಮಾಜಿ ಸಂಸದ ರಮೇಶ ಕತ್ತಿ ಮಾತನಾಡಿ, ಈ ಸರ್ಕಾರ ರೈತ ವಿರೋಧಿ ನೀತಿ ಬಿಡದಿದ್ದರೆ ಹೋರಾಟದ ಮೂಲಕವೇ ನ್ಯಾಯ ಪಡೆಯುತ್ತೇವೆ ಎಂದು ಗುಡುಗಿದರು.

ರೈತ ಹಿತರಕ್ಷಣಾ ವೇದಿಕೆ ಅಧ್ಯಕ್ಷ ರಾಮಚಂದ್ರ ಜೋಶಿ, ಬಸವರಾಜ ಹುಂದ್ರಿ, ಮಾರುತಿ ಅಷ್ಟಗಿ, ಮುಖಂಡರಾದ ಮಹಾವೀರ ನಿಲಜಗಿ, ಎ.ಕೆ. ಪಾಟೀಲ, ಸುನೀಲ ಪರ್ವತರಾವ, ಶಿವಾನಂದ ಮುಡಸಿ, ರೋಹನ ನೇಸರಿ, ಕಲಗೌಡ ಪಾಟೀಲ, ರಾಯಪ್ಪಾ ಡೂಗ, ಗುರುರಾಜ ಕುಲಕರ್ಣಿ, ಪಿಂಟು ಶೆಟ್ಟಿ, ಅಪ್ಪಾಸ್ ತುಬಚಿ, ವಕೀಲರ ಸಂಘದ ಅಧ್ಯಕ್ಷ ಡಿ.ಕೆ. ಅವರಗೋಳ, ಉಪಾಧ್ಯಕ್ಷ ಶಿವಾನಂದ ಮರಿನಾಯಿಕ, ಕಾರ್ಯದರ್ಶಿ ಎಸ್.ಎನ್. ಮಗದುಮ್ಮ, ರೈತ ಸಂಘಟನೆಯವರು ಉಪಸ್ಥಿತರಿದ್ದರು.

ಹುಕ್ಕೇರಿ ತಾಲೂಕನ್ನು ಬರಪೀಡಿತ ಪಟ್ಟಿಗೆ ಸೇರ್ಪಡೆ ಮಾಡುವಂತೆ ಆಗ್ರಹಿಸಿ ಪಕ್ಷಾತೀತವಾಗಿ ಹಮ್ಮಿಕೊಂಡ ಪ್ರತಿಭಟನಾಕಾರರನ್ನುದ್ದೇಶಿಸಿ ಮಾಜಿ ಸಂಸದರಮೇಶಕತ್ತಿ ಮಾತನಾಡಿದರು.

18ಲಕ್ಷ ಟನ್ ಕಬ್ಬು ನುರಿಸುವ ಗುರಿ

ಯಕ್ಸಂಬಾ : ಸಮೀಪದ ಹುಪರಿ ಪಟ್ಟಣದ ಕಲ್ಲಪ್ಪಣ್ಣ ಅವಾಡೆ ಜವಹಾರ ಶೇತಕರಿ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ 2026-27ನೇ ಸಾಲಿನ 34ನೇ ಹಂಗಾಮಿನ ಬಾಯ್ಲರ ಪ್ರದೀಪನಾ ಸಮಾರಂಭವನ್ನು ಸಂಸ್ಥಾಪಕ ಅಧ್ಯಕ್ಷ ಕಲ್ಲಪ್ಪಣ್ಣ ಅವಾಡೆ, ಸಂಚಾಲಕ ಪ್ರಕಾಶ ಅವಾಡೆ ಹಾಗೂ ಕಿಶೋರಿ ಅವಾಡೆ ಹಾಗೂ ಶಾಸಕ ಡಾ.ರಾಹುಲ ಅವಾಡೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಕಾರ್ಖಾನೆಯ ಸಂಚಾಲಕ ಪ್ರಕಾಶ ಅವಾಡೆ ಮಾತನಾಡಿ ಪ್ರಸಕ್ತ ಹಂಗಾಮಿಗೆ ಸುಮಾರು 20,000 ಹೆಕ್ಟೇರ್ ಕಬ್ಬು ನೋಂದನಿಯಾಗಿದ್ದು 18 ಲಕ್ಷ ಟನ್ ಕಬ್ಬು ನುರಿಯು ಗುರಿ ಹೊಂದಿದೆ. ಕಾರ್ಖಾನೆಗೆ ಕಬ್ಬು ಸಾಗಾನೆ ಮಾಡಲು 352 ಟ್ರ್ಯಾಕ್ಟರ್ ಮತ್ತು ಟ್ರಕ್, 714 ಢಂಪಿಂಗ್, 293 ಎತ್ತಿನ ಗಾಡಿ ಮತ್ತು 75 ಕಬ್ಬು ಕಟಾವು ಯಂತ್ರ ನಿಯೋಜಿಸಲಾಗಿದೆ. ಎಲ್ಲ ರೈತ ಸದಸ್ಯರು ತಮ್ಮೆಲ್ಲ ಕಬ್ಬನ್ನು ಕಾರ್ಖಾನೆಗೆ ಕಳುಹಿಸಿ ಆಡಳಿತ ಮಂಡಳಿಯವರ ಹಮ್ಮಿಕೊಂಡ ಗುರಿ ಮುಟ್ಟಲು ಸಹಕರಿಸಲು ವಿನಂತಿಸಿದರು.

ಉಪಾಧ್ಯಕ್ಷ ಬಾಬಾಸಾಬ ಚೌಗುಲೆ, ಉತ್ತಮ ಅವಾಡೆ, ಮೌಸಮಿ ಅವಾಡೆ, ದಾದಾಸೊ ಸಾಂಗಾವೆ, ಸುಕುಮಾರ ಕಿನಂಗೆ ಸೇರಿದಂತೆ ನಿರ್ದೇಶಕರು, ವ್ಯವಸ್ಥಾಪಕ ನಿರ್ದೇಶಕ ಮನೂಹರ ಜೋಷಿ ಮುಂತಾದವರಿದ್ದರು.

ಹುಪರಿ ಕಲ್ಲಪ್ಪಣ್ಣ ಅವಾಡೆ ಶೇತಕರಿ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ 2026-27ನೇ ಸಾಲಿನ 34ನೇ ಹಂಗಾಮಿನ ಬಾಯ್ಲರ ಪ್ರದೀಪನಾ ಸಮಾರಂಭವನ್ನು ಸಂಸ್ಥಾಪಕ ಅಧ್ಯಕ್ಷ ಕಲ್ಲಪ್ಪಣ್ಣ ಅವಾಡೆ ನೆರವೇರಿಸಿದರು.

ಪದೋನ್ನತಿ; ಮುಖ್ಯ ಶಿಕ್ಷಕ ಸನ್ಮಾನ

ಭಾಗೋಜಿಕೊಪ್ಪ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ ಶಿಕ್ಷಕರ ಸನ್ಮಾನ ಸಮಾರಂಭವನ್ನು ಗಣ್ಯರು ಉದ್ಘಾಟಿಸಿದರು.

ರಾಮದುರ್ಗ : ಶಿಕ್ಷಕ ವೃತ್ತಿಯಲ್ಲಿ ವೈಯಕ್ತಿಕ ಬದುಕು ಲೆಕ್ಕಿಸದೇ ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಸಮಯ ಮೀಸಲಿಟ್ಟಾಗ ಮಾತ್ರ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಶಿಕ್ಷಕರಾಗಲು ಸಾಧ್ಯವಿದೆ. ನನ್ನ ವೃತ್ತಿ ಬದುಕಿನಲ್ಲಿ ಅದನ್ನು ಪಾಲಿಸಿಕೊಂಡು ಬಂದಿದ್ದೇನೆ ಎಂದು ಹಿರಿಯ ಮುಖ್ಯ ಶಿಕ್ಷಕ ಆರ್.ವೈ. ಸಂಕ್ರಿ ಹೇಳಿದರು.

ತಾಲೂಕಿನ ಭಾಗೋಜಿಕೊಪ್ಪ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪದೋನ್ನತಿ ಹೊಂದಿದ ಪ್ರಯುಕ್ತ ಗ್ರಾಮಸ್ಥರು ಹಾಗೂ ಶಾಲೆಯ ನೇತೃತ್ವದಲ್ಲಿ ಏರ್ಪಡಿಸಿದ್ದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಪ್ರಾಥಮಿಕ ಶಿಕ್ಷಕರ ಸಂಘ ರಾಜ್ಯ ಘಟಕದ ಸಹ ಕಾರ್ಯದರ್ಶಿ ಜಯಕುಮಾರ ಹೇಬಳಿ, ಶಿಕ್ಷಕರ ಸಂಘಟನೆಯ ಬೆಳಗಾವಿ ಜಿಲ್ಲಾ ಘಟಕದ ಅಧ್ಯಕ್ಷ ರಮೇಶ ಗೋಣಿ ಮಾತನಾಡಿದರು. ಈ ವೇಳೆ ಜಿಪಿಟಿ ಸಂಘದ ತಾಲೂಕು ನಿರ್ದೇಶಕ ವೆಂಕನಗೌಡ ಪಾಟೀಲ ಅವರನ್ನು ಸನ್ಮಾನಿಸಲಾಯಿತು. ಭಾಗೋಜಿಕೊಪ್ಪ ಹಿರೇಮಠದ ಶಿವಮೂರ್ತಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಎಸ್‌ಡಿಎಂಸಿ ಅಧ್ಯಕ್ಷ ನಿಂಗಪ್ಪ ಕೊಪ್ಪದ, ಕೃಷ್ಣಾ ರಾಚನ್ನವರ, ತಾಲೂಕು ಘಟಕದ ಅಧ್ಯಕ್ಷ ಎಸ್.ವಿ. ಪಾಟೀಲ, ಪ್ರಧಾನ ಕಾರ್ಯದರ್ಶಿ ಎಸ್.ಸಿ. ಹುರಕಡ್ಲಿ, ನಿರ್ದೇಶಕ ಎಲ್.ಎಂ. ಅಣ್ಣಿಗೇರಿ,

ಆರ್.ಬಿ. ಅಣ್ಣಿಗೇರಿ, ಸಿಆರ್‌ಪಿಗಳಾದ ಪ್ರಕಾಶ ಜೇವೂರ, ವಿ.ಡಿ. ದಳವಾಯಿ, ಶಿಕ್ಷಕರಾದ ಎ.ವಿ. ಕೋಳಿ, ಸಿ.ಎಸ್. ಸಿಂಗಾರಕೊಪ್ಪ, ಪಿ.ವಿ. ನ್ಯಾಮಗೌಡ, ರಾಜು ಮುಗಳಿಹಾಳ, ಸವಿತಾ ಹಂಚಿನಾಳ ಮತ್ತಿತರರಿದ್ದರು. ಅಶೋಕ ಬೂದಿ ಸ್ವಾಗತಿಸಿದರು. ಶಿಕ್ಷಕಿ ಎಸ್.ಎಂ. ನದಾಫ ವಂದಿಸಿದರು.

ಕೊಲೆ ಯತ್ನ: ಪ್ರಕರಣ ದಾಖಲು

ರಾಮದುರ್ಗ : ಅಣ್ಣನ ಹೆಂಡತಿ ಮೇಲೆ ವ್ಯಕ್ತಿಯೊರ್ವ ಕೊಲೆ ಮಾಡಲು ಯತ್ನಿಸಿದ ಘಟನೆ ತಾಲೂಕಿನ ಸುರೇಬಾನ-ಮನಿಹಾಳ ಗ್ರಾಮದಲ್ಲಿ ಸೋಮವಾರ ನಡೆದಿದೆ.

ಘಟನೆಯಲ್ಲಿ ಮನಿಹಾಳ ಗ್ರಾಮದ ಲೀಲಾ ತುಕಾರಾಮ ಗೊಣಬಾಳ(51) ಘಾಯಗೊಂಡಿದ್ದಾರೆ. 8 ವರ್ಷಗಳ ಹಿಂದೆ ತನ್ನ ತಂದೆ ನೇಕಾರಿಕೆ ಮಗ್ಗದ ಪಾಲು ಕೊಟ್ಟಿಲ್ಲ ಎಂದು ಆರೋಪಿಸಿ ಗಾಯಗೊಂಡ ಲೀಲಾಳ ಮೈದುನ ವಿಶ್ವನಾಥ ಗಂಗಾಧರ ಗೋಣಾಬಾಳ ಮಗ್ಗ ನೇಯುವ ಸ್ಥಳಕ್ಕೆ ಧಾವಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಚಾಕುವಿನಿಂದ ಲೀಲಾಳ ಹಲ್ಲೆ ಮಾಡಿದ್ದಾನೆ ಎಂದು ಸೊಸೆ ಸುಮಾ ತುಕಾರಾಮ ಗೊಣಬಾಳ ಸುರೇಬಾನ ಪೊಲೀಸ್ ಠಾಣೆಗೆ ದೂರು ನೋಡಿದ್ದಾಳೆ. ಪ್ರಕರಣ ದಾಖಲಿಸಿಕೊಂಡ ಸುರೇಬಾನ ಪೊಲೀಸರು ಪಿಎಸ್‌ಐ ಗುರುರಾಜ ಕಲಬುರಗಿ ಅವರ ನೇತೃತ್ವದಲ್ಲಿ ಮುಂದಿನ ತನಿಖೆ ಕೈಕೊಂಡಿದ್ದಾರೆ.

ಅಣಕು ಸಂಸತ್ ಆಯೋಜನೆ ಅಗತ್ಯ

ಸಂ.ಕ ಸಮಾಚಾರ, ರಾಮದುರ್ಗ

ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳು ಉತ್ತಮವಾಗಿ ಕಾರ್ಯ ನಿರ್ವಹಿಸಿದಲ್ಲಿ ಪ್ರಜಾಪ್ರಭುತ್ವದ ಯಶಸ್ಸು ಸಾಧ್ಯವಿದೆ ಎಂದು ನಗರದ ಜೆಎಂಎಫ್‌ಸಿ ನ್ಯಾಯಾಲಯದ ಹಿರಿಯ

ದಿವಾಣಿ ನ್ಯಾಯಾಧೀಶೆ ಪುಷ್ಪಲತಾ ಕೆ. ಹೇಳಿದರು.

ತಾ.ಪಂ ಸಭಾ ಭವನದಲ್ಲಿ ಸೋಮವಾರ ತಾಲೂಕಾಡಳಿತ, ಸಮಾಜ ಕಲ್ಯಾಣ ಇಲಾಖೆ, ತಾ.ಪಂ, ತಾಲೂಕು ಕಾನೂನು ಸೇವಾ ಸಮಿತಿ ಸೇರಿದಂತೆ ವಿವಿಧ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಯುವ ಸಂಸತ್ತು ಸಭೆಯ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ವಿದ್ಯಾರ್ಥಿ ದಿಶೆಯಲ್ಲಿಯೇ ಸಂಸತ್ತಿನ ಮಹತ್ವ ಅರಿಯಲು ಶಿಕ್ಷಣ ಇಲಾಖೆಯಲ್ಲಿ ಮೇಲಿಂದ ಮೇಲೆ ಅಣಕು ಸಂಸತ್ತು ಏರ್ಪಡಿಸಬೇಕು. ಅಣಕು ಸಂಸತ್ತಿನಲ್ಲಿ ಸರಕಾರದ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಸಚಿವರ ಪಾತ್ರ ಕುರಿತು ವಿಷಯಗಳ ಚರ್ಚೆಯನ್ನು ವಿದ್ಯಾರ್ಥಿಗಳು ತಿಳಿಯುವಂತಾಗಬೇಕು ಎಂದರು.

ತಹಶೀಲ್ದಾರ ಪ್ರಕಾಶ ಗಾಯಕವಾಡ ಮಾತನಾಡಿ, ರಾಜ್ಯದ ಪ್ರತಿ ತಾಲೂಕಿನಲ್ಲಿ ಯುವ ಸಂಸತ್ತು ರಚಿಸಿ, ವಿಧಾನಸಭೆ ಅಧಿವೇಶನದಲ್ಲಿ ಚರ್ಚಿಸಲಾಗುವ ವಿಷಯಗಳನ್ನು ಅನುಕು ಪ್ರದರ್ಶನ ಮಾಡುವ ವ್ಯವಸ್ಥೆಯನ್ನು ಮಾಡಲಾಗಿ, ಯುವ ಪೀಳಿಗೆ ಪ್ರಾರಂಭದಲ್ಲಿಯೇ ಪ್ರಜಾಪ್ರಭುತ್ವದ ಯಶಸ್ವಿಗೆ ಅನುಸರಿಸಬೇಕಾದ ಕ್ರಮಗಳನ್ನು ತಿಳಿಯುವಂತಾಗುತ್ತದೆ ಎಂದು ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿ ದಿವಾಣಿ ನ್ಯಾಯಾಧೀಶೆ ಭಾಗ್ಯಶ್ರೀ ಮಾತನಾಡಿದರು. ನ್ಯಾಯವಾದಿಗಳ ಸಂಘದ ಅಧ್ಯಕ್ಷ ಅಜರಾಜ ಮುದಕವಿ, ಪ್ರಾಚಾರ್ಯ ಎಂ.ಡಿ. ಕಮತಗಿ, ಪ್ರೊ.ಬಿ.ಬಿ. ಹರನಟ್ಟಿ, ಎಸ್.ಐ. ಭಾಯಪ್ಪಗೋಳ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಹಣಮಂತ ವಕ್ಕುಂದ ಸೇರಿದಂತೆ ಇತರರಿದ್ದರು.

ಇದೇ ಸಂದರ್ಭದಲ್ಲಿ ಪ್ರೌಢ, ಪದವಿಪೂರ್ವ, ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳನ್ನು ಒಳಗೊಂಡ ಯುವ ಸಂಸತ್ತಿನ ಅನುಕು ಪ್ರದರ್ಶನ ನಡೆದು, ಉತ್ತಮ ವಾಕ್‌ಚಾತುರ್ಯ ಪ್ರದರ್ಶಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ರಾಮದುರ್ಗ ತಾ.ಪಂ ಸಭಾ ಭವನದಲ್ಲಿ ಏರ್ಪಡಿಸಿದ್ದ ಯುವ ಸಂಸತ್ ಅನುಕು ಪ್ರದರ್ಶನವನ್ನು ಹಿರಿಯ ದಿವಾಣಿ ನ್ಯಾಯಾಧೀಶೆ ಪುಷ್ಪಲತಾ ಕೆ. ಉದ್ಘಾಟಿಸಿದರು.

ಬೆಳಗಾವಿಯ ಹಲಗಾ ತಾಲ್ಲೂಕಿನ ಸುವರ್ಣ ಗಾರ್ಡನ್ ಸಭಾ ಭವನದಲ್ಲಿ ಜಿಲ್ಲಾ ಮಟ್ಟದ ಜನಜಾಗೃತಿ ಜಾಥಾ ಮತ್ತು ಗಾಂಧೀ ಸ್ಮೃತಿ ಹಾಗೂ ಪಾನ ಮುಕ್ತರ ಅಭಿನಂದನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಶಾಸಕಿ ಲಕ್ಷ್ಮೀ ಹೆಬ್ಬಾಳಕರ ಮಾತನಾಡಿದರು.

ರಾಮ ಬಿಜೆಪಿಗರ ಸ್ವತ್ತಲ್ಲ; ಹೆಬ್ಬಾಳಕರ

ಬೆಳಗಾವಿ: ರಾಮ ಹಾಗೂ ಗಾಂಧಿ ಟೋಪಿ ಯಾರೊಬ್ಬರ ಸ್ವತ್ತಲ್ಲ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಗಾಂಧಿ ಜಯಂತಿ ಹಾಗೂ ವ್ಯಸನಮುಕ್ತ ಕಾರ್ಯಕ್ರಮದಲ್ಲಿ ಶಾಸಕಿ ಲಕ್ಷ್ಮಿ ಹೆಬ್ಬಾಳ್ಕರ್ ಅಭಿಪ್ರಾಯಪಟ್ಟರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ , ಅಖಿಲ ಕರ್ನಾಟಕ ಜಿಲ್ಲಾ ಜನಜಾಗೃತಿ ವೇದಿಕೆ ಟ್ರಸ್ಟ್ , ಪ್ರಗತಿ ಬಂಧು, ಸ್ವ-ಸಹಾಯ ಸಂಘಗಳ ಒಕ್ಕೂಟ ಬೆಳಗಾವಿ ಜಿಲ್ಲೆ ಮತ್ತು ಜಿಲ್ಲಾ ವ್ಯಾಪ್ತಿಯ ನವಜೀವನ ಸಮಿತಿಗಳ ಸಂಯುಕ್ತ ಆಶ್ರಯದಲ್ಲಿ ಹಲಗಾ

ಸುವರ್ಣ ಗಾರ್ಡನ್ ಸಭಾ ಭವನದಲ್ಲಿ ಜಿಲ್ಲಾ ಮಟ್ಟದ ಜನಜಾಗೃತಿ ಜಾಥಾ ಮತ್ತು ಗಾಂಧೀ ಸ್ಮೃತಿ ಹಾಗೂ ಪಾನ ಮುಕ್ತರ ಅಭಿನಂದನೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮಹಾತ್ಮ ಗಾಂಧೀಜಿಯವರು ತಮ್ಮ ಸರ್ವಸ್ವ ತ್ಯಾಗ ಮಾಡಿ ಸತ್ಯ, ಅಹಿಂಸೆಯ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾನ್ ನಾಯಕರು ಎಂದು ಸ್ಮರಿಸಿದರು.

ಗಾಂಧೀಜಿಯವರ ಆದರ್ಶಗಳನ್ನು ಕೇವಲ ಪುಸ್ತಕದಲ್ಲಿ ಕಲಿಯದೆ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಗಾಂಧೀಜಿಯವರು ಕೊನೆಯ ಉಸಿರಿನಲ್ಲಿಯೂ 'ಹೇ ರಾಮ್' ಎಂದಿದ್ದನ್ನು ಸ್ಮರಿಸಿ, ರಾಮನು ಬಿಜೆಪಿಗರ ಸ್ವತ್ತಲ್ಲ; ಬದಲಾಗಿ ರಾಮ ಹಾಗೂ ಗಾಂಧಿ ಟೋಪಿಯು ದೇಶದ ಪ್ರತಿಯೊಬ್ಬರ ಹಾಗೂ ಕಾಂಗ್ರೆಸ್ ಪಕ್ಷದ ಸೌಭಾಗ್ಯ ಮತ್ತು ಮರ್ಯಾದೆಯ ಪ್ರತೀಕವಾಗಿದೆ ಎಂದು ತಿರುಗೇಟು ನೀಡಿದರು.

ಅಡವೇಶ್ವರ ದೇವರು ಸಾನ್ನಿಧ್ಯ ವಹಿಸಿದ್ದರು.ಅಖಿಲ ಕರ್ನಾಟಕ ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಡಾ.ಜಿ.ಆರ್. ಸೋನೇರ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಸಂಘಟನಾಧ್ಯಕ್ಷ ನಟರಾಜ ಬಾದಾಮಿ ಪಾನ ಮುಕ್ತರಿಗೆ ಅಭಿನಂದನೆ ಸಲ್ಲಿಸಿದರು. ಪ್ರಾದೇಶಿಕ ನಿರ್ದೇಶಕಿ ದಯಾಸೀಲ, ಡಾ.ಶ್ರೀಕಾಂತ್ ಬಿ.ಎನ್. ಸೇರಿದಂತೆ ಹಲವು ಗಣ್ಯರು ಹಾಗೂ ವಿವಿಧ ಒಕ್ಕೂಟಗಳ ಪ್ರಮುಖರು ಉಪಸ್ಥಿತರಿದ್ದರು.

बैंक ऑफ़ बड़ौदा Bank of Baroda
ಗೋಕಾಕ್ ಶಾಖೆ, ಸಿ.ಟಿ.ಸಿ ನಂ.3200ಎ/36/ಬಿ1 ವಾರ್ಡ್ ನಂ.22, ಆನಂದ್ ಟಾಕೀಸ್ ರಸ್ತೆ, ಬಸವೇಶ್ವರ ವೃತ್ತದ ಹತ್ತಿರ, ಗೋಕಾಕ್-591307.
ಇ-ಹರಾಜು ಮಾರಾಟ ಸೂಚನೆ

2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 6(2) ಮತ್ತು 8(6) ರ ಪ್ರಾವಿಸೋಗಳೊಂದಿಗೆ ಓದಿಕೊಳ್ಳಬೇಕಾದ 2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಇ-ಹರಾಜು.
ಸಾರ್ವಜನಿಕರಿಗೆ ವಿಸ್ತಾರವಾಗಿ, ಸಾಲಗಾರನಿ(ರಿ)ಗೆ/ ಅಡಮಾನದಾರನಿ(ರಿ)ಗೆ ಹಾಗೂ ಜಾಮೀನುದಾರನಿ(ರಿ)ಗೆ ನಿರ್ದಿಷ್ಟವಾಗಿ ಸೂಚನೆ ನೀಡುವುದೇನೆಂದರೆ, ಕೆಳಕಂಡ ಸ್ಥಿರ ಆಸ್ತಿಗಳು ಭದ್ರತಾ ಸಾಲಿಗರಿಗೆ (ಸೆಕ್ಯೂರ್ಡ್ ಕ್ರೆಡಿಟರ್) ರಿಗೆ ಅಡಮಾನವಾಗಿದ್ದು/ಅವರ ಭಾರ್ಜನಲ್ಲಿದ್ದು, ಇದರ ಸ್ವಾಧೀನತೆಯನ್ನು ಸೆಕ್ಯೂರ್ಡ್ ಕ್ರೆಡಿಟರ್ ರವರಾದ, ಬ್ಯಾಂಕ್ ಆಫ್ ಬರೋಡಾದ ಅಧಿಕೃತ ಅಧಿಕಾರಿಗಳು ಪಡೆದುಕೊಂಡಿದ್ದು, ಇವುಗಳನ್ನು ಕೆಳಕಂಡ ಖಾತೆಯ(ಗಳ) ಬಾಕಿ ವಸೂಲಾತಿಗಾಗಿ ಎಲ್ಲಿ ಹೇಗಿದೆಯೋ ಹಾಗೆಯೇ, ಎಲ್ಲಿ ಏನಿದೆಯೋ ಹಾಗೆಯೇ ಮತ್ತು ಏನು ಉಳಿದಿದೆಯೋ" ಅವುಗಳನ್ನು ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ. ಸಾಲಗಾರನ(ರ)/ಅಡಮಾನದಾರನ(ರ)/ಜಾಮೀನುದಾರನ(ರ) ಭದ್ರತಾ ಆಸ್ತಿ(ಗಳು)/ಬಾಕಿ/ ಮೀಸಲು ಬೆಲೆ / ಇ-ಹರಾಜು ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಹೆಚ್ಚಿಸಬಹುದಾದ ಮೊತ್ತ ವಿವರಗಳು ಕೆಳಕಂಡಂತಿವೆ :-

ಕ್ರ ಸಂ	ಸಾಲಗಾರರ ಮತ್ತು ಅಡಮಾನವಾಗಿರಿಸಿದ ಆಸ್ತಿಯ ಮಾಲಕರು ಹೆಸರು ಮತ್ತು ವಿಳಾಸ	ಆಸ್ತಿಯ ವಿವರ:	ಒಟ್ಟು ಬಾಕಿ	ಇ-ಹರಾಜಿ ದಿನಾಂಕ ಮತ್ತು ಸಮಯ:	ಆಸ್ತಿಯ ಮೀಸಲು ಬೆಲೆ ಇಎಂಡಿ ಕನಿಷ್ಠ ಬಿಡ್ಡಿನ ಹೆಚ್ಚುವರಿ ಮೊತ್ತ (ರೂ)		
1	ಮೆ॥ ಶ್ರೀ ಸಾಯಿ ಎಲೆಕ್ಟ್ರಾನಿಕ್ ಮಾಲೀಕರು: ಶ್ರೀ ರಾಮನಾಥ ಪಾಂಡುರಂಗ ಪೆಡ್ನೇಕರ್, ಸಿ.ಟಿ.ಎಸ್ ನಂ. 2999, ಭರಮಗೌಡ ಬಿಲ್ಡಿಂಗ್, ಹೊಸಪೇಟೆ ರಸ್ತೆ, ಹೊಸಪೇಟೆ ಗಲ್ಲಿ, ಗೋಕಾಕ್-591307 ವಾಸಸ್ಥಳ 1:146/2+3 1ನೇ ಕ್ರಾಸ್, ವಿವೇಕಾನಂದ ನಗರ, ಗೋಕಾಕ್-591307. ವಾಸಸ್ಥಳ 2:ಹೆಚ್.ನಂ.35, ರಾಜ್‌ವಾಡಾ ಮಾಪುಸಾ, ಗೋವಾ. ಜಾಮೀನುದಾರ:ಶ್ರೀ ಅಬ್ದುಲ್ ಖಾದರ್ ಗೌಸ್ ಸಾಹೇಬ್ ವಂಕಾನದಾರ್, ಸಂಗನಕೇರಿ, ಕಲ್ಲೋಳಿ ಪೋಸ್ಟ್, ಗೋಕಾಕ್-591224.	ಗೋಕಾಕ್ ತಾಲೂಕು, ಗೋಕಾಕ್ ಪಟ್ಟಣದ ಆರ್.ಎಸ್.ನಂ.135/ಸಿ ಪೈಕಿ 1425.710 ಚದರ ಅಡಿ ವಿಸ್ತೀರ್ಣವುಳ್ಳ ಕೃಷಿಯೇತರ ಖಾಲಿ ನಿವೇಶನ ಪ್ಲಾಟ್ ನಂ.7 ರ ಎಲ್ಲಾ ಭಾಗ ಮತ್ತು ಪಾರ್ಸೆಲ್. ಆಸ್ತಿಯ ಗಡಿಗಳು:ಪೂರ್ವ: ಪ್ಲಾಟ್ ನಂ.6, ಪಶ್ಚಿಮ: ಪ್ಲಾಟ್ ನಂ.8, ಉತ್ತರ: 9 ಮೀಟರ್ ರಸ್ತೆ, ದಕ್ಷಿಣ: ಶ್ರೀ ರಾಮನಾಥ ತಂದೆ ಪಾಂಡುರಂಗ ಪೆಡ್ನೇಕರ್ @ ಪಟ್ನೇಕರ್ ಅವರ ಹೆಸರಿನಲ್ಲಿರುವ ಆರ್.ಎಸ್.ನಂ.135/1 ರಲ್ಲಿನ ಆಸ್ತಿ.	ರೂ.39,09,944/- (ರೂಪಾಯಿ ಮೂವತ್ತೊಂಬತ್ತು ಲಕ್ಷದ ಒಂಬತ್ತು ಸಾವಿರದ ಒಂಬತ್ತು ನೂರ ನಾಲವತ್ನಾಲ್ಕು ಮಾತ್ರ) + ಮೊತ್ತದ ಮೇಲಿನ ಬಡ್ಡಿ ಮತ್ತು ಇತರ ಖರ್ಚು ವೆಚ್ಚಗಳು	ಈ-ಹರಾಜು ದಿನಾಂಕ: 22.10.2026 ಈ-ಹರಾಜು ಸಮಯ: ಬೆಳಿಗ್ಗೆ 10:00 ರಿಂದ ಸಂಜೆ 5:00 ರವರೆಗೆ ಬಿಡ್ ಸಮಯ: 22.10.2026 ಬೆಳಿಗ್ಗೆ 10:00 ರಿಂದ ಸಂಜೆ 5:00 ರವರೆಗೆ	ಮೀಸಲು ಬೆಲೆ ರೂ.14,11,200/- ಇಎಂಡಿ: ರೂ.1,41,120/- ಕನಿಷ್ಠ ಬಿಡ್ಡಿನ ಹೆಚ್ಚುವರಿ ಮೊತ್ತ: ರೂ.25,000/-	ಭೌತಿಕ	12.10.2026 ಬೆಳಿಗ್ಗೆ 10:00 ರಿಂದ 17.10.2026 ಸಂಜೆ 4:00 ರವರೆಗೆ (ರಜಾದಿನಗಳನ್ನು ಹೊರತುಪಡಿಸಿ)

ಟಿಪ್ಪಣಿ: 04.06.2019 ರಂದು ಶ್ರೀ ರಾಮನಾಥ ಪಾಂಡುರಂಗ ಪೆಡ್ನೇಕರ್ ಅವರು ಶ್ರೀ ಉದಯ ರಾಮಚಂದ್ರ ಹುಲಕುಂದ ಅವರ ಪರವಾಗಿ ಮಾಡಿಕೊಟ್ಟಿರುವ ನೋಂದಾಯಿತ ಮಾರಾಟ ಒಪ್ಪಂದವು ಋಣಭಾರ ಪ್ರಮಾಣಪತ್ರದಲ್ಲಿ (Encumbrance Certificate) ಪ್ರತಿಫಲಿಸುತ್ತದೆ. ಈ ಒಪ್ಪಂದದ ಅವಧಿಯು ಮುಗಿದಿದ್ದು, ಈಗ ಈ ಸ್ವತ್ತನ್ನು ಹರಾಜಿನ ಮೂಲಕ ಮಾರಾಟ ಮಾಡಬಹುದು ಎಂದು ನಮ್ಮ ಕಾನೂನು ಸಲಹೆಗಾರರು ದೃಢಪಡಿಸಿದ್ದಾರೆ
ಮಾರಾಟದ ವಿವರವಾದ ಷರತ್ತು ನಿಬಂಧನೆಗಳಿಗಾಗಿ https://baankent.com ಹಾಗೂ https://www.bankofbaroda.in/e-auction.htm ನಲ್ಲಿನ ಲಿಂಕ್ ಅನ್ನು ನೋಡಿ ಅಲ್ಲದೇ ನಿರೀಕ್ಷಿತ ಬಿಡ್‌ದಾರರು ಅಧಿಕೃತ ಅಧಿಕಾರಿ ಮೊಬೈಲ್ ಸಂಖ್ಯೆ 9962693386ಗೂ ಸಹ ಕರೆ ಮಾಡಬಹುದು.
ದಿನಾಂಕ:05.10.2026
ಸ್ಥಳ:ಗೋಕಾಕ್
ಸಹಿ/- ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ

ಶಿವಾಜಿ ಕಾಗಣಿಕರ ಪರಿಸರ ಕಾಳಜಿ ಅನನ್ಯ

ಬೆಳಗಾವಿ : ಅಭಿವೃದ್ಧಿ ಹೆಸರಿನಲ್ಲಿ ಪ್ರಾಕೃತಿಕ ವಿನಾಶ ನಿರಂತರವಾಗಿ ನಡೆಯುತ್ತಿದೆ. ಪ್ರಾಕೃತಿಕ ಸಂರಕ್ಷಣೆಯೊಂದಿಗೆ ಅಭಿವೃದ್ಧಿ ಸಾಧ್ಯವಿದೆ ಎಂಬುದಕ್ಕೆ ಶಿವಾಜಿ ಕಾಗಣಿಕರ ಅವರ ಕಾರ್ಯಸಾಧನೆಗಳು ಉತ್ತಮ ನಿದರ್ಶನಗಳಾಗಿವೆ ಎಂದು ಪರಿಸರವಾದಿ ಹೋರಾಟಗಾರ್ತಿ ಮೇಧಾ ಪಾಟ್ಕರ್ ತಿಳಿಸಿದರು.

ಖ್ಯಾತ ಪರಿಸರವಾದಿ, ಸಾಮಾಜಿಕ ಕಾರ್ಯಕರ್ತ ಬೆಳಗಾವಿಯ ಡಾ.ಶಿವಾಜಿ ಕಾಗಣಿಕರ ಅವರ 'ಸರ್ವೋದಯಚಾ ವಾಟಸರೂ' ಮರಾಠಿ ಭಾಷೆಯ ಆತ್ಮಚರಿತ್ರೆ ಹಾಗೂ 'ಗುಡ್ಡಗಾಡಿನ ಗಾಂಧಿ' ಕನ್ನಡ ಜೀವನ ಚರಿತ್ರೆ ಕೃತಿಗಳನ್ನು ಭಾನುವಾರ ಗೋಗಟೆ ರಂಗ ಮಂದಿರದಲ್ಲಿ ಜರುಗಿದ ಸಮಾರಂಭದಲ್ಲಿ ಲೋಕಾರ್ಪಣೆಗೊಳಿಸಿ ಮಾತನಾಡಿದರು.

ವೈಯಕ್ತಿಕ ಬದುಕನ್ನು ಸಂಪೂರ್ಣ ತ್ಯಾಗಗೊಳಿಸಿ ಸಮಾಜದ ಶ್ರೇಯೋಭಿವೃದ್ಧಿಗೆ ತಮ್ಮ ಜೀವನದ ಉದ್ದಕ್ಕೂ ಹಳ್ಳಿ ಹಳ್ಳಿಗಳನ್ನು ಸುತ್ತಾಡಿ ಅತ್ಯಂತ ವಿನಮ್ರ ಭಾವದಿಂದ ಗುರುತರವಾದ ಕೆಲಸಗಳನ್ನು ನಿರ್ವಹಿಸಿದ್ದಾರೆ ಎಂದು ಶ್ಲಾಘಿಸಿದರು.

ಶಿವಾಜಿ ಅವರ ಆತ್ಮಚರಿತ್ರೆ ಅವರ ಜೀವನ ಹಾಗೂ ಕೆಲಸ ಕಾರ್ಯಗಳ ಸಾಧನೆಯ ಪಟ್ಟಿಗೆ ಮಾತ್ರ ಸೀಮಿತವಾಗದೆ, ಆ ಮೂಲಕ ಅವರ ಸಾಮಾಜಿಕ ಬದ್ಧತೆಯ ಜೀವನ ಕ್ರಮ ಹಾಗೂ ಗ್ರಾಮ ಸ್ವರಾಜ್ಯ ಅನುಷ್ಠಾನದ ವೈಚಾರಿಕ ಚಿಂತನ ಕ್ರಮದ ಕ್ರಮಬದ್ಧತೆ ವ್ಯಕ್ತವಾಗಿದೆ. ವಿಶಿಷ್ಟ ಅನುಭವ, ಅಧ್ಯಯನ, ಆಚಾರ, ವಿಚಾರಗಳೊಂದಿಗೆ ಸರಳತೆ ಹಾಗೂ ವಿನಮ್ರ ಭಾವ ಮಡುಗಟ್ಟಿದೆ. ಅವರ ನಿರಂತರ 55 ವರ್ಷಗಳ ಕಾರ್ಯಸಾಧನೆ ಮಾತುಗಳ ವರ್ಣನೆಗೆ ಮೀರಿದಾಗಿದೆ. ಇಂತಹ ಅಪರೂಪದ ವ್ಯಕ್ತಿತ್ವ ನಿರ್ಮಾಣದ ಹಿಂದೆ ತಾಯಿಯ ಮಮಕಾರ, ವಂಚಿತ ಸಮುದಾಯಗಳ ಕಣ್ಣೀರು, ಬಡತನ, ಹಸಿವು, ಹಿಂಸೆ ಶೋಷಣೆ, ಮಹಿಳೆಯರ ವೇದನೆಗಳು ಪಾಠ ಕಲಿಸಿವೆ ಎಂದು ಮೇಧಾ ಪಾಟ್ಕರ್ ವಿವರಿಸಿದರು.

ಈ ಸಂದರ್ಭದಲ್ಲಿ ಜಯಂತ ನಾರ್ವೇಕರ, ಸುಭಾಷ್ ಓವಳಕರ್, ಮಾಲೋಜಿರಾವ್ ಅಸ್ತೇಕರ್, ವಿಕ್ರಮ ಪಾಟೀಲ, ವಿಜಯ ದಿವಾಣ, ನೀಲಾ ಅಪ್ಟೆ, ಇಂದ್ರಜಿತ ಮೋರೆ, ಸವಿತಾ ಪವಾರ ಇತರೆ ಗಣ್ಯರು, ಲೇಖಕರು, ಶಿವಾಜಿ ಅವರ ಅಪಾರ ಸಂಖ್ಯೆಯ ಅಭಿಮಾನಿಗಳು ಪಾಲ್ಗೊಂಡಿದ್ದರು.

ಖ್ಯಾತ ಪರಿಸರವಾದಿ, ಸಾಮಾಜಿಕ ಕಾರ್ಯಕರ್ತ ಬೆಳಗಾವಿಯ ಡಾ.ಶಿವಾಜಿ ಕಾಗಣಿಕರ ಅವರ ಆತ್ಮಚರಿತ್ರೆ ಹಾಗೂ 'ಗುಡ್ಡಗಾಡಿನ ಗಾಂಧಿ' ಕನ್ನಡ ಜೀವನ ಚರಿತ್ರೆ ಕೃತಿಗಳನ್ನು ಭಾನುವಾರ ಗೋಗಟೆ ರಂಗ ಮಂದಿರದಲ್ಲಿ ಖ್ಯಾತ ಸಾಮಾಜಿಕ ಕಾರ್ಯಕರ್ತೆ, ಪರಿಸರವಾದಿ ಹೋರಾಟಗಾರ್ತಿ ಮೇಧಾ ಪಾಟ್ಕರ್ ಲೋಕಾರ್ಪಣೆಗೊಳಿಸಿ ಮಾತನಾಡಿದರು.